# ಎಪಿಎಂಸಿ ತಿದ್ದುಪಡಿ ಕಾಯ್ದೆ ಅಂಗೀಕಾರ

**ವಿಧಾನಸಭೆ:** ಕೃಷಿ ಮಾರುಕಟ್ಟೆ ಸಮಿತಿಗಳಲ್ಲಿ (ಎಪಿಎಂಸಿ) ರೈತರು ಕೃಷಿ ಉತ್ಪನ್ನಗಳನ್ನು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಲು ಅವಕಾಶ ಕಲ್ಪಿಸಲು ಅನುಕೂಲವಾಗುವ ಗ್ರಾಹಕರ ಮಾರಾಟ ಅಂಗಳ ಕಾರ್ಯಕ್ರಮ ಜಾರಿಗೊಳಿಸುವ ಉದ್ದೇಶದಿಂದ ಮಂಡಿಸಿದ ತಿದ್ದುಪಡಿ ವಿಧೇಯಕಕ್ಕೆ ಮಂಗಳವಾರ ಸದನ ಅಂಗೀಕಾರ ನೀಡಿತು.



- **ಗ್ರಾಹಕರ ಮಾರಾಟ ಅಂಗಳ ಜಾರಿ**
- **ಎಪಿಎಂಸಿಗಳಲ್ಲಿ ಮಾರಾಟಕ್ಕೆ ರೈತರಿಗೆ ಜಾಗ**
- **ಕಾನೂನಿನಿಂದ ವರ್ತಕರಿಗೆ ಅನುಕೂಲದ ಶಂಕೆ**

ಕರ್ನಾಟಕ ಕೃಷಿ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ವಿಧೇಯಕ 2014ನ್ನು ಮಂಡಿಸಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಟಿ.ಬಿ.ಜಯಚಂದ್ರ, ಈ ವಿಧೇಯಕದಿಂದ ಕೃಷಿ ಉತ್ಪನ್ನಗಳನ್ನು ಸಂಸ್ಕರಣ ಹಾಗೂ ಮಾರಾಟ ಮಾಡಲು ಎಪಿಎಂಸಿಗಳಲ್ಲಿ ರೈತರಿಗೆ ಜಾಗ ನೀಡಲಾಗುತ್ತದೆ. ಆದರೆ ಅದಕ್ಕೆ ಯಾವುದೇ ತೆರಿಗೆ ವಿಧಿಸುವುದಿಲ್ಲ. ರೈತರು ಅಲ್ಲಿ ಜಾಗ ಪಡೆದು ತಮ್ಮ ಉತ್ಪನ್ನಗಳನ್ನು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡಬಹುದು. ಇದರಿಂದ ರೈತ ಮತ್ತು ಗ್ರಾಹಕ ಇಬ್ಬರಿಗೂ ಒಳ್ಳೆಯದಾಗುತ್ತದೆ ಎಂದು ಹೇಳಿದರು.

ತಮಿಳುನಾಡಿನಲ್ಲಿ ಈ ಪ್ರಯೋಗ ಯಶಸ್ವಿಯಾಗಿದ್ದು, ಮಧ್ಯವರ್ತಿಗಳಿಂದ ರೈತರ ಶೋಷಣೆ ತಪ್ಪಿಸಲು ಇದರಿಂದ ಸಹಾಯವಾಗುತ್ತದೆ. ಊರಿಗೆ ಹತ್ತಿರವಾಗಿರುವ ಎಪಿಎಂಸಿಗಳಲ್ಲಿ ಈ ಪದ್ಧತಿ ಮೊದಲು ಜಾರಿಗೆ ಬರಲಿದೆ ಎಂದು ಹೇಳಿದರು.

ವಿರೋಧ

ಆದರೆ ವಿಧೇಯಕಕ್ಕೆ ಬಿಜೆಪಿ, ಜೆಡಿಎಸ್ ಸದಸ್ಯರಿಂದ ತೀವ್ರ ವಿರೋಧ ವ್ಯಕ್ತವಾಯಿತು. ವರ್ತಕರೇ ರೈತರ ಹೆಸರಿನಲ್ಲಿ ಎಪಿಎಂಸಿಗಳಲ್ಲಿ ಜಾಗ ಪಡೆದು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಸಾಧ್ಯತೆ ಇದೆ. ಇದರಿಂದ ರೈತರಿಗೆ ಯಾವುದೇ ಅನುಕೂಲವಾಗುವುದಿಲ್ಲ. ಅಲ್ಲಿಗೆ ಜಾಗ ಪಡೆಯಲು ಬರುವವರನ್ನು ರೈತರು ಎಂದು ಹೇಗೆ ಗುರುತು ಮಾಡುತ್ತೀರಿ? ಅವರಿಗೆ ಯಾವುದಾದರೂ ಗುರುತು ಪತ್ರ ನೀಡುತ್ತೀರಾ? ಎಂದು ಬಿಜೆಪಿಯ ಸಿ.ಟಿ.ರವಿ ಪ್ರಶ್ನಿಸಿದರು.

ಜೆಡಿಎಸ್‌ನ ಶಿವಲಿಂಗೇಗೌಡ ಮಾತನಾಡಿ ಸಾಮಾನ್ಯವಾಗಿ ಎಪಿಎಂಸಿ ಯಾರ್ಡ್‌ಗಳು ಊರಿನಿಂದ ಹೊರಗೆ ಇರುತ್ತವೆ. ಆದ್ದರಿಂದ ಸಾರ್ವಜನಿಕರು ತರಕಾರಿ ಇತ್ಯಾದಿಗಳನ್ನು ಖರೀದಿ ಮಾಡಲು ಎಪಿಎಂಸಿಗಳಿಗೆ ಬರುವುದಿಲ್ಲ. ಹಾಗಾಗಿ ಈ ಕಾನೂನಿನಿಂದ ಅವರಿಗೆ ಅನುಕೂಲವಾಗುವುದಿಲ್ಲ ಎಂದು ಹೇಳಿದರು.

ಎಪಿಎಂಸಿ ವ್ಯವಸ್ಥೆ ಇಂದು ಕೇಂದ್ರೀಕರಣವಾಗಿದೆ. ಏನೇ ಕೆಲಸ ಆಗಬೇಕಾದರೂ ಬೆಂಗಳೂರಿನಲ್ಲಿರುವ ನಿರ್ದೇಶಕರ ಕಚೇರಿಯಿಂದ ಅಪ್ಪಣೆ ಹೋಗಬೇಕು ಎಂದು ಬಿಜೆಪಿಯ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರೆ, ಜೆಡಿಎಸ್‌ನ ಬಿ.ಬಿ.ನಿಂಗಯ್ಯ ಹಾಗೂ ಕೋನರೆಡ್ಡಿ ಮಾತನಾಡಿ ಹೊಸ ಕಾನೂನಿನಿಂದ ಪ್ರಯೋಜನ ಆಗುವುದಿಲ್ಲ ಎಂದು ಅಭಿಪ್ರಾಯಪಟ್ಟರು. ರೈತರ ಹೆಸರಿನಲ್ಲಿ ಎಪಿಎಂಸಿಗಳಲ್ಲಿ ಬೇರೆಯವರು ಜಾಗ ಪಡೆಯುವಂತಾಗಬಾರದು ಎಂದು ಕಾಂಗ್ರೆಸ್‌ನ ರಾಜಣ್ಣ ಹೇಳಿದರು. ನಂತರ ವಿಧೇಯಕ ಧ್ವನಿಮತದ ಅಂಗೀಕಾರ ಪಡೆಯಿತು.